ಪುಟ ಬಂಗಾರ

# ಎಲ್ಲಿದ್ದಾರೆ ಅಂಥವರು?





**ಕುವೆಂಪು** ಅವರೊಂದಿಗೆ ವಿರಸ ಬರಬಹುದಾಗಿದ್ದ ಪ್ರಸಂಗವೊಂದು ನಡೆಯಿತು. ನಾನು ರೀಡರ್ ಹುದ್ದೆಗೆ ಅರ್ಜಿ ಹಾಕಿದ್ದೆ. ಕುವೆಂಪು ವೈಸ್ ಛಾನ್ಸಲರ್ ಆಗಿದ್ದುದರಿಂದ ಆಯ್ಕೆ ಸಮಿತಿ ಅಧ್ಯಕ್ಷರಾಗಿದ್ದರು. ಆ ಹುದ್ದೆ ನನಗೆ ಸಿಕ್ಕಲಿಲ್ಲ. ನನಗಿಂತ ಹಿರಿಯರೂ, ನನಗೆ ಗುರುಗಳಾಗಿದ್ದವರೂ ಎಲ್ಲ ವಿಧದಲ್ಲಿಯೂ ಆ ಹುದ್ದೆಗೆ ಅತ್ಯಂತ ಅರ್ಹರೂ ಆಗಿದ್ದವರಿಗೆ ಆ ಹುದ್ದೆ ದೊರಕಿತು. ಆದರೆ ಆಗ ನಾನು ಪಿಎಚ್.ಡಿ.ಯ ಗರ್ವಪರ್ವತದ ಶಿಖರಗಳಲ್ಲೇ ಸಂಚರಿಸುತ್ತಿದ್ದವನು. ನಾನು ಯಾವುದೋ ಕಾರಣಕ್ಕೆ ಬೆಂಗಳೂರಿಗೆ ಹೋಗಿದ್ದವನು, ಅಲ್ಲಿಂದ ಕುವೆಂಪು ಅವರಿಗೆ ಪತ್ರ ಬರೆದು, ನಾನು ವಿಶ್ವವಿದ್ಯಾಲಯದ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದರೆ ತಪ್ಪು ತಿಳಿಯಬಾರದೆಂದೂ ತಿಳಿಸಿದೆ. ನಾನು ವಾಸ್ತವವಾಗಿ ದೊಡ್ಡ ವಕೀಲರೊಬ್ಬರಲ್ಲಿ ಸಲಹೆ ಕೇಳಿದೆ. ಅವರು ಮೊಕದ್ದಮೆ ಹೂಡಲು ಬೇಕಾದ ಎಲ್ಲ ಮಾಹಿತಿಗಳನ್ನೂ ಪಡೆದರು. ಅನಂತರ ಎಲ್ಲವನ್ನೂ ಕೂಲಂಕಷವಾಗಿ ಅಧ್ಯಯನ ಮಾಡಿ ನನ್ನನ್ನು ಕೇಳಿದರು:

'ಕೋರ್ಟಿನಲ್ಲಿ ನೀವು ಹೀಗೆ ಸಾಕ್ಷ್ಯ ಹೇಳಬೇಕಾಗುತ್ತದೆ: 'ಕುಲಪತಿಗಳಾದ ಡಾ. ಕೆ.ವಿ. ಪುಟ್ಟಪ್ಪನವರು ಜಾತಿ ಪಕ್ಷಪಾತದಿಂದ ತಮ್ಮ ಜಾತಿಯವರಿಗೆ ಈ ಹುದ್ದೆಯನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರ ನನ್ನ ವಿದ್ಯಾರ್ಹತೆಗಳನ್ನು ಕಡೆಗಣಿಸಿದ್ದಾರೆ.' ಹೀಗೆ ಹೇಳಲು ಸಿದ್ಧರಾಗಿದ್ದೀರಾ?'

ನಾನು ನನಗೆ ಪರಿಚಿತರಾಗಿದ್ದ ಆ ಹಿರಿಯ ವಕೀಲರ ಮುಂದೆ ತಲೆತಗ್ಗಿಸಿ ಕುಳಿತೆ. ಅನಂತರ ಹೇಳಿದೆ: 'ಇಲ್ಲ, ಖಂಡಿತ ಹೇಳಲಾರೆ, ಜಾತೀಯತೆಯ ಆರೋಪವನ್ನು ಖಂಡಿತ ಆ ಪರಿಶುದ್ಧ ಹೃದಯದ ವ್ಯಕ್ತಿಯ ಮೇಲೆ ಹೊರಿಸಲಾರೆ. ನನಗೆ ಬೇರೆ ಹುದ್ದೆ ಸಿಕ್ಕುವುದಿರಲಿ, ಇರುವ ಹುದ್ದೆ ಹೋದರೂ ಚಿಂತೆಯಿಲ್ಲ. ಹಾಗೆ ಮಾತ್ರ ಹೇಳಲಾರೆ.'

ವಕೀಲರು ಹೇಳಿದರು: 'ನಾನು ಕುವೆಂಪು ಅವರನ್ನೂ ಬಲ್ಲೆ. ನಿಮ್ಮನ್ನೂ ಬಲ್ಲೆ. ಯಾವುದೋ ಉದ್ವೇಗದಲ್ಲಿ ಕೇಸು ಹಾಕಲು ಬಂದಿದ್ದೀರಿ. ವಿಷಯವನ್ನು ಇಲ್ಲಿಗೆ ಬಿಡಿ.'

ನಾನು ಸುಮ್ಮನೆ ಹಿಂದಕ್ಕೆ ಬಂದೆ.

ಕೃತಿ: 'ಹೀಗಿದ್ದರು ಪ್ರಭುಶಂಕರ' (ಸಂ: ನ. ರವಿಕುಮಾರ, ಅಸಿತಾ ಪ್ರಭುಶಂಕರ್). ಉಲ್ಲೇಖ: 'ಅಂಥವರು ಎಲ್ಲಿದ್ದಾರೆ? ಎಲ್ಲಿದ್ದಾರೆ ಅಂಥವರು?' (ಲೇ: ಎಂ. ಕೃಷ್ಣೇಗೌಡ) ಬರಹದಲ್ಲಿ ಪ್ರಭುಶಂಕರ ಅವರು ಹೇಳಿದ ಪ್ರಸಂಗ.